# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1101

ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ್ ಗೌಡ

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 13-03-2020

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ಹೈದರಾಬಾದ್ ಕರ್ನಾಟಕ ವ್ಯಾಪ್ತಿಯ ಬೀದರ್ ಜಿಲ್ಲೆಯಲ್ಲಿ ಹಾಗೂ ಮಧ್ಯ ಕರ್ನಾಟಕ ತುಮಕೂರು ಜಿಲ್ಲೆಯಲ್ಲಿ ಈವರೆಗೂ ಸರ್ಕಾರಿ ಸಾರಿಗೆ ಸಂಸ್ಥೆಯ ಬಸ್ ಸೌಕರ್ಯಗಳಿಲ್ಲದ ಹಲವು ಗ್ರಾಮಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಭಾಗದಲ್ಲಿ ಸಾರಿಗೆ ವ್ಯವಸ್ಥೆ ಕಲ್ಪಿಸಲು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; | **ಬೀದರ್ ಜಿಲ್ಲೆಯ** ವ್ಯಾಪ್ತಿಯಲ್ಲಿ 667 ಗ್ರಾಮಗಳ ಪೈಕಿ 661 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದೆ. ಉಳಿದ 6 ಗ್ರಾಮಗಳಿಗೆ ಬಸ್ ಸಂಚಾರಕ್ಕೆ ಯೋಗ್ಯ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೇವೆ ಒದಗಿಸಿರುವುದಿಲ್ಲ.<br><br>ಸಾರಿಗೆ ಸಂಸ್ಥೆಗಳ ನಿಯಮಾವಳಿಗಳನ್ವಯ ಮುಖ್ಯ ರಸ್ತೆಯಿಂದ 1.5 ಕಿ.ಮೀ. ವರೆಗೆ ಅಂತರದಲ್ಲಿರುವ ಹಳ್ಳಿಗಳಿಗೆ ನೇರ ಸಾರಿಗೆ ಸೌಲಭ್ಯ ಒದಗಿಸದೇ ಇದ್ದರೂ ಸಹ ಅದನ್ನು ಬಸ್ ಸೇವೆ ಒದಗಿಸಿದ ಹಳ್ಳಿ ಎಂದು ಪರಿಗಣಿಸಲಾಗುತ್ತಿದೆ.<br><br>**ತುಮಕೂರು ಜಿಲ್ಲೆ** ವ್ಯಾಪ್ತಿಯಲ್ಲಿ ಇರುವ ಒಟ್ಟು 2726 ಗ್ರಾಮಗಳ ಪೈಕಿ ಕರಾರಸಾ ನಿಗಮದ ವತಿಯಿಂದ 2168 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.<br><br>ಸದರಿ ಜಿಲ್ಲೆ ವ್ಯಾಪ್ತಿಯಲ್ಲಿ ಖಾಸಗಿ ಸಾರಿಗೆ ಪ್ರವರ್ತಕರೂ ಸಹ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿದ್ದಾರೆ. ಆದಾಗ್ಯೂ, ಸಾರಿಗೆ ಸೌಲಭ್ಯ ಕಲ್ಪಿಸದಿರುವ ಗ್ರಾಮಗಳಿಗೆ ನಿಗಮದಿಂದ ಸಾರಿಗೆ ಸೌಲಭ್ಯ ಕಲ್ಪಿಸಲು ಮನವಿಗಳು ಬಂದಲ್ಲಿ, ಪರಿಶೀಲಿಸಿ ಮೂಲಭೂತ ಸೌಕರ್ಯಗಳನ್ನು ಕ್ರೋಡೀಕರಿಸಿಕೊಂಡು ಪರವಾನಗಿ ಪಡೆದು ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಕ್ರಮ ವಹಿಸಲಾಗುವುದು. |
| ಆ | ಸಾರಿಗೆ ಕಛೇರಿಯಲ್ಲಿ ಡಿಪೋ ಮ್ಯಾನೇಜರ್‌ಗಳಿಂದ ಸರ್ಕಾರಿ ಸಾರಿಗೆ ಬಸ್‌ಗಳ ಡ್ರೈವರ್ ಹಾಗೂ ಕಂಡೆಕ್ಟರ್ ನಿರಂತರ ಹಿಂಸೆ ಅನುಭವಿಸುತ್ತಿದ್ದಾರೆ ಎನ್ನುವ ದೂರುಗಳು ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳೇನು (ವಿವರ ನೀಡುವುದು). | ಸಾರಿಗೆ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಘಟಕ ವ್ಯವಸ್ಥಾಪಕರು, ತಮ್ಮ ಅಧೀನದ ಚಾಲಕ ಹಾಗೂ ನಿರ್ವಾಹಕರಿಗೆ ರಜೆ ಮಂಜೂರು ಮಾಡುವ ವಿಚಾರ ಮತ್ತು ಅನುಸೂಚಿ / ಮಾರ್ಗಗಳನ್ನು ನೀಡುವ ವಿಚಾರದಲ್ಲಿ ದೂರುಗಳು ಬರುತ್ತಿದ್ದವು. ಈ ದೂರುಗಳನ್ನು ಪರಿಹರಿಸಲು ಸಂಸ್ಥೆಗಳಲ್ಲಿ ಕೆಳಕಂಡ ಪಾರದರ್ಶಕ ಪದ್ಧತಿಯನ್ನು ಜಾರಿಗೆ ತರಲಾಗಿದೆ.<br><br>ನೌಕರರು ರಜೆಯನ್ನು ತಂತ್ರಾಂಶ ಆಧಾರಿತ ರಜೆ ನಿರ್ವಹಣಾ ವ್ಯವಸ್ಥೆ (Online leave Management system) ಮೂಲಕ ಪಡೆದುಕೊಳ್ಳುವ ಪದ್ಧತಿಯನ್ನು ನಿಗಮದಲ್ಲಿ ಜಾರಿಗೆ ತರಲಾಗಿದೆ ಮತ್ತು ಈ ಪದ್ಧತಿಯಲ್ಲಿ ಯಾವುದೇ ಮಾನವ ಹಸ್ತಕ್ಷೇಪ (Human intervention) ಅವಕಾಶ ಇರುವುದಿಲ್ಲ.<br><br>ಅದೇ ರೀತಿ, ಚಾಲಕ ನಿರ್ವಾಹಕರಿಗೆ ಅನುಸೂಚಿ/ ಮಾರ್ಗಗಳನ್ನು ಅವರ ಸೇವಾ ಹಿರಿತನ ಮತ್ತು ಕೆಲವು ಮಾನದಂಡಗಳನ್ನು ಒಳಗೊಂಡ ಪಾರದರ್ಶಕ ಪದ್ಧತಿಯನ್ನು ಸಿಇಟಿ ಮಾದರಿಯಲ್ಲಿ ಜಾರಿಗೆ ತರಲಾಗಿದೆ. ಇದರಿಂದ ಬಹುತೇಕ ದೂರುಗಳು ಪೂರ್ಣಪ್ರಮಾಣದಲ್ಲಿ ಬಗೆಹರಿದಿರುತ್ತದೆ.<br><br>ಪ್ರಸ್ತುತ ಸಾರಿಗೆ ಕಛೇರಿಯಲ್ಲಿ ಡಿಪೋ ಮ್ಯಾನೇಜರ್‌ಗಳಿಂದ ಸರ್ಕಾರಿ ಸಾರಿಗೆ ಬಸ್‌ಗಳ ಡ್ರೈವರ್ ಹಾಗೂ ಕಂಡೆಕ್ಟರ್ ನಿರಂತರ ಹಿಂಸೆ ಅನುಭವಿಸುತ್ತಿದ್ದಾರೆ ಎನ್ನುವಂತಹ ನಿರ್ದಿಷ್ಟ ದೂರುಗಳು ದಾಖಲಾಗಿರುವುದಿಲ್ಲ. |

| | | |
|---|---|---|
| ಇ | ತುಮಕೂರಿನ ಗಣಿ ಬಾಧಿತ ತಾಲ್ಲೂಕುಗಳಾದ ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ಹೊಸದುರ್ಗ ಗಡಿ ಗ್ರಾಮಗಳಲ್ಲಿ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ತಾಲ್ಲೂಕುಗಳ ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಕ.ರಾ.ರ.ಸಾ.ನಿಗಮದ ವತಿಯಿಂದ ತುಮಕೂರಿನ ಗಣಿ ಬಾಧಿತ ತಾಲ್ಲೂಕುಗಳಾದ ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ಹೊಸದುರ್ಗ ಗಡಿ ಗ್ರಾಮಗಳಲ್ಲಿ ಕೆಳಕಂಡಂತೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ:<br>• ಗುಬ್ಬಿ ತಾಲ್ಲೂಕು ವ್ಯಾಪ್ತಿಯಲ್ಲಿರುವ ಒಟ್ಟು 347 ಗ್ರಾಮಗಳ ಪೈಕಿ ಗಣಿ ಬಾಧಿತ ಗ್ರಾಮಗಳು ಒಳಗೊಂಡಂತೆ 271 ಗ್ರಾಮಗಳಿಗೆ ಒಟ್ಟು 64 ಅನುಸೂಚಿಗಳಿಂದ ವಿವಿಧ ಮಾರ್ಗಗಳಲ್ಲಿ 283 ಸಿಂಗಲ್ ಟ್ರಿಪ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.<br>• ತಿಪಟೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಒಟ್ಟು 232 ಗ್ರಾಮಗಳ ಪೈಕಿ ಗಣಿ ಬಾಧಿತ ಗ್ರಾಮಗಳು ಒಳಗೊಂಡಂತೆ 222 ಗ್ರಾಮಗಳಿಗೆ ಒಟ್ಟು 57 ಅನುಸೂಚಿಗಳಿಂದ ವಿವಿಧ ಮಾರ್ಗಗಳಲ್ಲಿ 255 ಸಿಂಗಲ್ ಟ್ರಿಪ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.<br>• ಚಿಕ್ಕನಾಯಕನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿರುವ ಒಟ್ಟು 235 ಗ್ರಾಮಗಳ ಪೈಕಿ 150 ಗ್ರಾಮಗಳಿಗೆ ಒಟ್ಟು 16 ಅನುಸೂಚಿಗಳಿಂದ ವಿವಿಧ ಮಾರ್ಗಗಳಲ್ಲಿ 43 ಸಿಂಗಲ್ ಟ್ರಿಪ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.<br>• ಹೊಸದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿರುವ ಒಟ್ಟು 226 ಗ್ರಾಮಗಳ ಪೈಕಿ ಗಡಿ ಪ್ರದೇಶದ ಗ್ರಾಮಗಳು ಒಳಗೊಂಡಂತೆ 113 ಗ್ರಾಮಗಳಿಗೆ ಒಟ್ಟು 20 ಅನುಸೂಚಿಗಳಿಂದ ವಿವಿಧ ಮಾರ್ಗಗಳಲ್ಲಿ 90 ಸಿಂಗಲ್ ಟ್ರಿಪ್‌ಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.<br>• ಆದಾಗ್ಯೂ, ಸಾರಿಗೆ ಸೌಲಭ್ಯ ಕಲ್ಪಿಸದಿರುವ ಗ್ರಾಮಗಳಿಗೆ ನಿಗಮದಿಂದ ಸಾರಿಗೆ ಸೌಲಭ್ಯ ಕಲ್ಪಿಸಲು ಮನವಿಗಳು ಬಂದಲ್ಲಿ, ಪರಿಶೀಲಿಸಿ ಮೂಲಭೂತ ಸೌಕರ್ಯಗಳನ್ನು ಕ್ರೋಡೀಕರಿಸಿಕೊಂಡು ಪರವಾನಗಿ ಪಡೆದು ಸಾರಿಗೆ ಸೌಲಭ್ಯ ಕಲ್ಪಿಸುವ ಬಗ್ಗೆ ಕ್ರಮ ವಹಿಸಲಾಗುವುದು.<br>• ಸದರಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಖಾಸಗಿ ಸಾರಿಗೆ ಪ್ರವರ್ತಕರೂ ಸಹ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿದ್ದು, ಸಾರ್ವಜನಿಕರು ಇದರ ಪ್ರಯೋಜನೆ ಪಡೆಯುತ್ತಿದ್ದಾರೆ. |

ಸಂಖ್ಯೆ: ಟಿಡಿ 78 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು